ಅವರು ಎಂದೂ ತಪ್ಪಿಸಿರಲಿಲ್ಲ! ಯಾರಾದರೂ ಜುಲುಮೆ ಮಾಡಿದರೆ 'ಇಂದಿನ ಕಾಯಕ ಇವತ್ತಿನ ಊಟಕ್ಕೆ ಚುಕ್ತಾ ಆಯಿತು! ನಾಳಿನ ಊಟಕ್ಕೆ ನಾಳಿನ ಕಾಯಕ' ಎಂದು ಸರ್ವಸಂಗ ಪರಿತ್ಯಾಗಿಯಂತೆ ಹೇಳಿ ಹಾಗೆಯೇ ಕುಳಿತುಬಿಡುತ್ತಿದ್ದರು.

ಕತ್ತಲೆಯನ್ನೇ ರಾಶಿ ಹಾಕಿದ್ದಂತೆ ಕಾಣುತ್ತಿದ್ದ ನರಸಿಂಹಯ್ಯನವರ ಮಾಳಿಗೆ ಮನೆಯತ್ತ ಮಾಸ್ತಮ್ಮನ ಕಾಲುಗಳು ಅರಿವಿಲ್ಲದಂತೆ ಸರಿಯತೊಡಗಿದವು. ಜಗಲಿಯ ಮೇಲೆ ಅಟ್ಟಿದ್ದ ರಾಗಿ, ಹುರುಳಿ ತುಂಬಿದ್ದ ಐದಾರು ಕೊರೆ ಚೀಲಗಳು ಅವಳ ಕಣ್ಣುಗಳನ್ನು ಬೆಳಗಿಸಿತು. ಕಣ್ಣು ತೆರೆದಿದ್ದರೂ ಕತ್ತಲೆ ಅವಳನ್ನು ನೆರಳಿನಂತೆ ಸುತ್ತುವರೆದಿತ್ತು. ಯಾರೋ ಅವಳ ಭುಜ ಹಿಡಿದು ತಡೆದರು. ಬೆಚ್ಚಿದ ಮಾಸ್ತಮ್ಮ ಹಿಂದಿರುಗಿ ನೋಡಿದಳು. ಕತ್ತಲೆಯನ್ನುಳಿದು ಅವಳ ಕಣ್ಣುಗಳಿಗೆ ಏನೋ ಕಾಣಲಿಲ್ಲ. ಇದು ಭಯವೋ, ಭ್ರಾಂತಿಯೋ ಏನೊಂದೂ ತಿಳಿಯಲಿಲ್ಲ. 'ಬಡವರ ಊಟ್ಲೆ ಎಪ್ಪೋದು ತಿಗ್ಡಮಾಣೆ ಮಾಸ್ತಿ' (ಬಡವರ ಮನೆಯಲ್ಲಿ ಎಂದೂ ಕದಿಯ ಬೇಡ ಕಣೆ ಮಾಸ್ತಿ) ಎಂದು ಯಾರೋ ಉಸುರಿದಂತಾಯಿತು. ಹಿಂದುರುಗಿ ನೋಡಿದಳು. ಅವಳ ಅಜ್ಜಿ ಕ್ಯಾಸಕ್ಕ ಕತ್ತಲಿನಲ್ಲಿ ಆಕಾರ ರಹಿತವಾಗಿ ನಿಂತಿದ್ದಳು. ತಾಯಿ ಇಲ್ಲದೆ ತಬ್ಬಲಿಯಾದ ತನ್ನನ್ನು ಕಣ್ಣಲ್ಲಿ ಕಣ್ಣಿಟ್ಟು ಸಾಕಿದ ತನ್ನ ಅಜ್ಜಿ ಕ್ಯಾಸಕ್ಕ ಹೇಳುತ್ತಿದ್ದ ಮಾತುಗಳು ಅವಳ ಮನಸ್ಸಿನಾಳದಿಂದ ಮೇಲೆದ್ದು ಬಂದವು. ಆ ಮಾತುಗಳು ಅವಳನ್ನು ತಲೆತಗ್ಗಿಸುವಂತೆ ಮಾಡಿದವು. ಕ್ಯಾಸಕ್ಕ ನಿಂತಿದ್ದ ಕಡೆಗೆ ಕೈ ಚಾಚಿದಳು. ಅವಳ ಕೈಗೆ ಗಾಳಿಯಲ್ಲಿದ್ದ ಕತ್ತಲೆ ಮೆತ್ತಿಕೊಂಡಿತು. ತುಸು ಅರಿವಿಗೆ ಬಂದ ಮಾಸ್ತಮ್ಮ ತನ್ನ ನಡಿಗೆಯ ದಿಕ್ಕನ್ನು ಬದಲಿಸಿ ಪೂಜಾರ ಚೌಡಯ್ಯನವರ ಕಣದೆಡೆಗೆ ಕಾಲೆಳೆಯುತ್ತಾ ಸಾಗಿದಳು. ಅವಳ ತುದಿಗಣ್ಣಿನಲ್ಲಿ ನೀರು ತುಂಬಿತ್ತು.

ಮಡಿಲಿನಲ್ಲಿ ತುಂಬಿಕೊಂಡ ಐದಾರು ಸೇರಿನಷ್ಟು ರಾಗಿಯನ್ನು ಭದ್ರಾಗಿ ಹಿಡಿದುಕೊಂಡು ಮಾಸ್ತಮ್ಮ ಹಟ್ಟಿಯ ಕಡೆಗೆ ಅಸಮತೋಲನದಿಂದಲೇ ನಡೆಯುತ್ತಿದ್ದಳು. ಪೂಜಾರಪ್ಪನವರಿಗೆ ತಾನು ರಾಗಿ ಕದ್ದದ್ದು ಎಲ್ಲಿ ತಿಳಿದುಬಿಡುತ್ತದೋ ಎಂಬ ಆತಂಕ ಅವಳನ್ನು ಬೆವರುವಂತೆ ಮಾಡಿತು. ಒಂದು ವೇಳೆ ಪೂಜಾರಪ್ಪನವರು ನನ್ನನ್ನು ಮಾಲು ಸಮೇತ ಹಿಡಿದು ಕೆಂಗರಾಮಯ್ಯನವರ ಮುಂದೆ ಎಳೆದುಕೊಂಡು ಹೋದರೆ?... ಅದನ್ನು ನೆನೆದೇ ಭಯದಿಂದ ಏದುಸಿರು ಬಿಟ್ಟಳು. ಊರಿನ ಮುಖಂಡರೂ ಮತ್ತು ನ್ಯಾಯವಾದಿಗಳೂ ಆದ ಜೋಡಿಮನೆ ಕೆಂಗರಾಮಯ್ಯನವರ ಕೈಗೆ ಸಿಕ್ಕಿಬಿದ್ದಿದ್ದೇ ಆದರೆ, ಅವರು ನನ್ನನ್ನು ಜೀವಬೆರಸೆ ಉಳಿಸುವುದಿಲ್ಲ. ಕೆಂಗರಾಮಯ್ಯ ಕಠೋರ ನ್ಯಾಯವಾದಿ. ಅವರ ನ್ಯಾಯ ವಿತರಣೆಯಲ್ಲಿ ಕದ್ದವರಿಗೆ ಕಠಿಣ ಶಿಕ್ಷೆಯೇ ಕಾದಿರುತ್ತಿತ್ತು. ಅದರಲ್ಲೂ ತಿನ್ನುವ ವಸ್ತುಗಳನ್ನು ಕದ್ದವರನ್ನು ಅವರು ಎಂದಿಗೂ ಕ್ಷಮಿಸುತ್ತಿರಲಿಲ್ಲ! ಕದ್ದವನನ್ನು ಬೆತ್ತಲು ಮಾಡಿ, ಕಂಬಕ್ಕೆ ಬಿಗಿದು ನೀರಲ್ಲಿ ನೆನಸಿದ ಬಾರುಕೋಲಿನಿಂದ ಬಾರಿಸುವುದು. ಇಲ್ಲವೇ ಕಾದ ಕಬ್ಬಿಣವನ್ನು ಎರಡೂ ಕೈಯಲ್ಲಿ ಹಿಡಿದು ಆಣೆ ಪ್ರಮಾಣ ಮಾಡುವುದು, ಕದ್ದ ಮಾಲಿನೊಂದಿಗೆ ಕಳವು ಮಾಡಿದವನನ್ನು ಅರೆಬೆತ್ತಲೆ ಮಾಡಿ ಊರೆಲ್ಲಾ ಮೆರವಣಿಗೆ ಮಾಡುವುದು ಅವರು ನೀಡುವ ತೀರ್ಪಿನ ಕೆಲವು ಉದಾಹರಣೆಗಳು. ಕೋರ್ಟ್ ಪೊಲೀಸ್ ಇವೆಲ್ಲವೂ ಅವರ ಪಾಲಿಗೆ ಅಸ್ತಿತ್ವದಲ್ಲೇ ಇರಲಿಲ್ಲ. ಈ ಬಗೆಯ ನ್ಯಾಯ ವಿತರಣೆಗಾಗಿ ಕೆಂಗರಾಮಯ್ಯನವರು ಸುತ್ತಮುತ್ತಿನ ಹಳ್ಳಿಗಳಲ್ಲಿ ಖ್ಯಾತರಾಗಿದ್ದರು.

ಆದರೆ ಮಾಸ್ತಮ್ಮನ ಗಂಡ ಚಿಕ್ಕರಾಮ ಮಾತ್ರ ಕೆಂಗರಾಮಯ್ಯನವರಿಗೂ ಹೆದರುತ್ತಿರಲಿಲ್ಲ. ಒಂದೆರಡು ಸಲ ಅವರಿಗೂ ಯಾಮಾರಿಸಿ ಅವರ ತೋಟದಲ್ಲೂ ಕದ್ದಿದ್ದ. ಅದು ಅವರಿಗೂ ಗೊತ್ತಿತ್ತು! ಆದರೆ ಕಳ್ಳರಾಮನೇ ಕದ್ದನೆನ್ನುವುದಕ್ಕೆ ಯಾವುದೇ ಸಾಕ್ಷ್ಯಾಧಾರಗಳು ಇಲ್ಲದೆ ಇದ್ದದ್ದರಿಂದ ಕೆಂಗರಾಮಯ್ಯನವರು ಹಲ್ಲುಕಚ್ಚಿಕೊಂಡು ಸುಮ್ಮನಾಗಿದ್ದರು.